ಪೋರ್ಟಿಕೋದಿಂದ ದೊಡ್ಡ ಗೇಟಿನವರೆಗೆ ಬಣ್ಣಬಣ್ಣದ ಕಲ್ಲು ಹದಿದ ದಾರಿಯಲ್ಲಿ ಇಬ್ಬರೂ ಜೊತೆಜೊತೆಯಾಗಿ ನಡೆದರು. ಹಾದಿಯ ಆಚೀಚೆಗೆ ಕ್ರಮಬದ್ಧವಾಗಿ ಬೆಳೆಸಿದ ಪುಷ್ಪೋದ್ಯಾನದ ಗಿಡಗಳಲ್ಲಿ ಅರಳಿ ತೊನೆದಾಡುತ್ತಿದ್ದ ನಾನಾ ಬಗೆಯ ಹೂಗಳು. ಅರೆಬಿರಿದ ಮುಗುಳುಗಳ ಮಲ್ಲಿಕಾ ಲತೆಗಳು. ನಕ್ಷತ್ರಗಳು ಅರಳಿದಂತೆ ಪಾರಿಜಾತವೃಕ್ಷದಲ್ಲಿ ಕಣ್ಣು ಬಿಡುತ್ತಿರುವ ಮುತ್ತಿನ ಬಣ್ಣದ, ಹವಳದ ತೊಟ್ಟಿನ ಪಾರಿಜಾತ ಪುಷ್ಪಗಳು. ಮೈ ಜುಂಗರಿಸುವಂತೆ ಬೀಸುತ್ತಿರುವ ತಂಪು ಗಾಳಿಯಲ್ಲಿ ಸುತ್ತ ಚೆಲ್ಲುವರಿದ ಸುಮಲೋಕದ ಘಮಲು ಬೆರೆತ ಅಮಲು. ಹೆಜ್ಜೆ ಸವೆಸಿ ದಾರಿ ಮುಗಿಸಿದರೆ ಸಾಮೀಪ್ಯ ಕರಗಿಬಿಡುತ್ತದೆಯೆಂಬಂತೆ ಇಬ್ಬರೂ ನಿಧನಿಧಾನಕ್ಕೆ ನಡೆದರು. ಮಾತುಗಳೆನ್ನುವುದು ಶಬ್ದ ಮಾತ್ರವಾಗಿ ಅರ್ಥ ಕಳೆದುಕೊಂಡ ಪರವಶತೆ. ದೇಹದ ವಯಸ್ಸನ್ನು ಹಿಮ್ಮೆಟ್ಟಿಸಿದ ಮನದ ಉನ್ಮತ್ತತೆ. ಪಾರಿಜಾತದ ಮರವನ್ನು ತೋರುಬೆರಳಿಂದ ನಿರ್ದೇಶಿಸುತ್ತಾ ಪಿಸುದನಿಯಲ್ಲಿ ಹೇಳಿದ ಫಲ್ಗುಣ, "ನೋಡಿ ಅಲ್ಲಿ, ಸುರಲೋಕದ ಪುಷ್ಪಗಳು ರಾತ್ರಿ ಕಳೆದು ಬೆಳಗಾಗುತ್ತಿದ್ದಂತೆ ತೊಟ್ಟು ಕಳಚಿ ಉದುರಿ ಬೀಳುತ್ತವೆ. ಹಾಗಾಗುವ ಮುನ್ನ ದೇವರಡಿಗೋ, ಮುಡಿಗೋ, ಏರಿಸುವುದು ಜಾಣತನ. ಏನಂತೀರಿ?"

"ನಾಳೆಯಿಂದ ಕವಿತೆಯ ಶುಭಾರಂಭ ಅಂದರೆ ಇವತ್ತೇ ಕವಿಯಾಗ್ಬಿದೀರಾ? ದೇವರಡಿಯಲ್ಲಿಟ್ಟರೂ, ಮುಡಿಗೇರಿಸಿದರೂ ಬಾಡುವುದಂತೂ ತಪ್ಪೋದಿಲ್ವಲ್ಲ?"

"ಹಾಗನ್ಬೇಡಿ ವೈಷ್ಣವಿ. ಉಪಯೋಗವಾದರಷ್ಟೇ ಹೂವಿಗೆ ಸಾರ್ಥಕತೆ. ಉದುರಿ ಮಣ್ಣಾದರೆ ಏನು ಬಂದ ಹಾಗಾಯ್ತು?"

"ಎಲ್ಲಿದೀರಿ ಸಾಹೇಬ್ರೇ? ತನಗೆ ಜನ್ಮ ಕೊಟ್ಟ ಮರಕ್ಕೆ ಗೊಬ್ಬರವಾಗೋದ್ರಲ್ಲಿ ಸಾರ್ಥಕತೆ ಇಲ್ಲ ಅಂತೀರಾ?"

"ಹೂವಿಗೆ ಹೊಸ ಪರಿಸರದ ಸಹವಾಸವೂ ಬೇಡ್ವಾ? ಇದ್ದಲ್ಲೇ ಬಿದ್ದು ಗೊಬ್ಬರವಾದ್ರೆ ಯಾವ ಹೊಸ ಅನುಭವ ಪಡೆದುಕೊಂಡ ಹಾಗಾಯ್ತು?"

"ಇದ್ದಲ್ಲೇ ಬಿದ್ದು ಮಣ್ಣಾಗ್ಬೇಕು ಅಂತ ಹೂವು ಹರಕೆ ಕಟ್ಕೊಂಡಿರಲ್ಲ. ಆದರೆ, ಹೂವು ನಲುಗದಂತೆ ಕೀಳುವ ಕೈ ಸಿಕ್ಬೇಕಲ್ಲ?"

ನಡೆಯುತ್ತಿದ್ದ ಫಲ್ಗುಣ ಹಟಾತ್ತನೆ ನಿಂತ. ಅವನ ಸಮಜೋಡಿಯಾಗಿ ಹೆಜ್ಜೆ ಇಡುತ್ತಿದ್ದ ವೈಷ್ಣವಿಯೂ ನಿಂತಳು. ಹಾದಿ ಬದಿಯ ಗಿಡದಲ್ಲಿ ಅರಳಿದ್ದ ಪನ್ನೀರುಗುಲಾಬಿಯೊಂದನ್ನು ಕಿತ್ತು, ಮೂಗಿನವರೆಗೆ ತೆಗೆದುಕೊಂಡು ಹೋಗಿ ಅದರ ಪರಿಮಳವನ್ನು ಆಘ್ರಾಣಿಸಿ, ಹೂವನ್ನು ವೈಷ್ಣವಿಯ ಕೈಗಿತ್ತ ಫಲ್ಗುಣ.

"ನಮ್ಮ ಅಪ್ಪನ್ನ ಕೇಳದೆ ಹೂವು ಕಿತ್ತು ಬಿಟ್ರಾ? ತಡೀರಿ, ಅಪ್ಪಂಗೆ ಹೇಳ್ತೀನಿ. ನಾಳೆ ನಿಮಗೆ ಉಂಟು ಹಬ್ಬ..."

"ನಾನು ಕೇಳಿದ್ರೆ ನಿಮ್ಮಪ್ಪ ಕೊಡಲ್ಲ ಅನ್ನಲ್ಲ. ಗೊತ್ತು ನಂಗೆ..."

"ಅಷ್ಟು ಗ್ಯಾರಂಟೀನಾ?"

"ಓಹೋ..."

ಗೇಟು ತೆಗೆಯುವಾಗ ಬದಿಯ ಕಾಂಪೌಂಡಿಗೆ ಹಬ್ಬಿಸಿದ್ದ ಮಲ್ಲಿಗೆಯ ಬಳ್ಳಿಯಿಂದ ಅರೆಬಿರಿದ ಕೆಲ ಮೊಗ್ಗುಗಳನ್ನು ಕಿತ್ತು ಫಲ್ಗುಣನಿಗೆ ಕೊಡ ಮಾಡಿದಳು ವೈಷ್ಣವಿ. ಫಲ್ಗುಣ ಅರ್ಧನಿಮೀಲಿತ ನೇತ್ರನಾಗಿ ಮಲ್ಲಿಗೆಯರಳುಗಳ ಸುಗಂಧವನ್ನು ಎದೆ ತುಂಬಿಸಿಕೊಂಡು ಹಗುರವಾಗಿ ಅವುಗಳನ್ನು ಜೇಬಿನಲ್ಲಿಟ್ಟುಕೊಂಡ. ವಿದಾಯದ ಗಳಿಗೆ.